**ಸಾಕ್ಷಿಯನ್ನು ದಿನಾಂಕ: 04-09-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಾದ ಶ್ರೀ ಬಿ.ಎಂ.ಬಿ. ರವರಿಂದಃ**

ನಿಡಿ-1 ರಿಂದ 3 ಮತ್ತು 12 ರಿಂದ 23 ಛಾಯಾ ಚಿತ್ರಗಳಲ್ಲಿ ಕಾಣುವ ಸ್ವತ್ತು ವಾದಿಗಳ ಸ್ವತ್ತು ಮತ್ತು ವಾದಿಗಳು ಅದರ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ದಾವಾ ಜಮೀನಿನಲ್ಲಿ ಇಲ್ಲದೇ ಇದ್ದಾಗ ನಾನು ಅಲ್ಲಿಗೆ ಹೋಗಿ ನಿಡಿ-1 ರಿಂದ 3 ಮತ್ತು 12 ರಿಂದ 23 ವಾಯಾ ಚಿತ್ರಗಳನ್ನು ತೆಗೆಸಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಯಾ ಚಿತ್ರಗಳಲ್ಲಿ ಕಾಣುವ ಕೊಳವೆ ಬಾವಿ ಮತ್ತು ಪಂಪ ಹೌಸನ್ನು ವಾದಿಯರು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ನಿಡಿ-4 ದಾಖಲೆಯ ಪ್ರಕಾರ ವಾದಿಗಳು ದಾವಾ ಜಮೀನಿನ ಸ್ವಾಧೀನದಲ್ಲಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ಮುನಿವೆಂಕಟ ಎನ್ನುವವರು ಚಿಕ್ಕಕಾಕಪ್ಪನ ಮಗ ಎಂದರೆ ಸರಿ. ದಾವಾ ಜಮೀನಿನಲ್ಲಿ ವಾದಿಗಳು ಸ್ವಾಧೀನದಲ್ಲಿದ್ದರೂ ಸಹ ನಿಡಿ-4 ರಲ್ಲಿ ಮುನಿವೆಂಕಟ ಬಿನ್ ಚಿಕ್ಕಕಾಕಪ್ಪ ಎಂದು ತಪ್ಪಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಚಿಕ್ಕಕಾಕಪ್ಪ ರಾಮಯ್ಯನ ಮಗ ಎಂದರೆ ಸರಿ. ನಿಡಿ-6 ಮತ್ತು ನಿಡಿ-7 ಗೇಣಿ ಮತ್ತು ಪಹಣಿ ಪತ್ರಿಕೆಗಳಲ್ಲಿ ನನ್ನ ಮತ್ತು ನನ್ನ ಕುಟುಂಬದವರ ಹೆಸರುಗಳು ಇಲ್ಲ ಎಂದರೆ ಸರಿ.

ನನ್ನ ತಂದೆಯ ಹೆಸರು ಪಿಳ್ಳಪ್ಪ ಎಂದರೆ ಸರಿ. ಮುನಿವೆಂಕಟಪ್ಪನ ಮಗ ಕೃಷ್ಣಪ್ಪ ಈಗ ಬದುಕಿರುವುದಿಲ್ಲ. ಸದರಿ ಕೃಷ್ಣಪ್ಪ ಚಿಂತಾಮಣಿಯಲ್ಲಿ ವಾಸವಾಗಿದ್ದ. ಸದರಿ ಕೃಷ್ಣಪ್ಪನಿಗೆ ಮುರಳಿಧರ ಮತ್ತು ರವಿ ಎನ್ನುವ ಇಬ್ಬರು ಗಂಡು ಮಕ್ಕಳು ಮಾತ್ರ ಇರುತ್ತಾರೆ. ಹೆಣ್ಣು ಮಕ್ಕಳು ಇರುವುದಿಲ್ಲ. ಅಸಲು ದಾವಾ ಸಂಖ್ಯೆಃ 852/2008 ರ 2 ರಿಂದ 6ನೇ ಪ್ರತಿವಾದಿಗಳಾದ ಗೌಡಪ್ಪ, ಕಾಕಪ್ಪ, ರತ್ನಮ್ಮ, ಕೃಷ್ಣಪ್ಪ ಮತ್ತು ವೆಂಕಟೇಶ್ ಈಗಲೂ ಜೀವಂತ ಇರುತ್ತಾರೆ. ಸದರಿ ದಾವೆಯ 7ನೇ ಪ್ರತಿವಾದಿ ಅಶ್ವಥನಾರಾಯಣ ಸುಮಾರು 7 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸದರಿ ದಾವೆಯು 8ನೇ ಪ್ರತಿವಾದಿಯಾದ ರಾಮಯ್ಯ ಬಿನ್ ಚಿಕ್ಕಕಾಕಪ್ಪ ವಿರುದ್ಧ ಅಬೇಟ್ ಆಗಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 852/2008 ನ್ನು ದಾಖಲಿಸಲು

ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ದಾವೆಯಲ್ಲಿ ಸದರಿ ದಾವಾ ಆಸ್ತಿಗಳ ಮೇಲೆ 8 ನೇ ಪ್ರತಿವಾದಿಯಾದ ರಾಮಯ್ಯನಿಗೆ ಸಂಪೂರ್ಣ ಹಕ್ಕಿರಲಿಲ್ಲ ಎಂದು ಬರೆಸಿದ್ದೇನೆ ಎಂದರೆ ಸರಿ. ಪ್ರಸ್ತುತ ದಾವಾ ಆಸ್ತಿಯಲ್ಲಿ ವಾದಿಯೇ ದಾವಾ ಜಮೀನಿನ ಸ್ವಾಧೀನಾನುಭವದಲ್ಲಿದ್ದಾನೆ ಎಂದರೆ ಸರಿಯಲ್ಲ. ಆದರೂ ಸಹ ಆತ ದಾವಾ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-11 ಕ್ಕೆ ಯಾವುದೇ ಕಾನೂನು ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ವಾದಿಗಳೇ ದಾವಾ ಜಮೀನಿನ ಸ್ವಾಧೀನದಲ್ಲಿದ್ದರೂ ಸಹ ಛಾಯಾ ಚಿತ್ರಗಳನ್ನು ನಾನು ಮತ್ತು ಛಾಯಾಗ್ರಹ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಪಿಳ್ಳಪ್ಪನು ಅವತಿ ಗ್ರಾಮದ ಸರ್ವೆ ನಂ.77/3 ರಲ್ಲಿನ 02-20 ಎಕರೆಯನ್ನು ಭೂ-ಪರಿವರ್ತನೆ ಮಾಡಿ ಎಸ್ಟೇಟ್ ಡೆವಲಪರ್ ಎನ್ನುವವರಿಗೆ ದಿನಾಂಕಃ 22-02-1997 ರಂದು ನಿಪಿ-8 ನೋಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ನಾನು ಮತ್ತು ನನ್ನ ಕುಟುಂಬದ ಇತರೆ ಸದಸ್ಯರು ಒಪ್ಪಿಗೆ ಸಾಕ್ಷಿಗಳಾಗಿ ಸಹಿ ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಲಕ್ಷ್ಮಯ್ಯ ಎನ್ನುವವರು ನನ್ನ ಚಿಕ್ಕಪ್ಪ ಎಂದರೆ ಸರಿ. ಸದರಿ ಲಕ್ಷ್ಮಯ್ಯನು ಅವತಿ ಗ್ರಾಮದ ಸರ್ವೆ ನಂ.77/8 ರಲ್ಲಿನ 02-25 ಎಕರೆಯನ್ನು ಭೂ-ಪರಿವರ್ತನೆ ಮಾಡಿ ಎಸ್ಟೇಟ್ ಡೆವಲಪರ್ ಎನ್ನುವವರಿಗೆ ದಿನಾಂಕಃ 30-01-1997 ರಂದು ನಿಪಿ-9 ನೋಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯರ ತಂದೆ ರಾಮಯ್ಯನು ಅವತಿ ಗ್ರಾಮದ ಸರ್ವೆ ನಂ.77/3 ರಲ್ಲಿನ 02-26 ಎಕರೆಯನ್ನು ಭೂ-ಪರಿವರ್ತನೆ ಮಾಡಿ ರಂಕೇ ಎಸ್ಟೇಟ್ ಡೆವಲಪರ್ ಎನ್ನುವವರಿಗೆ ದಿನಾಂಕಃ 30-01-1997 ರಂದು ನಿಪಿ-10 ನೋಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ವಾದಿ ಸಂಖ್ಯೆಃ 1(ಬಿ) ಒಪ್ಪಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದಾನೆ ಎಂದರೆ

ಸರಿಯಲ್ಲ. ಸದರಿ ಕ್ರಯಪತ್ರದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ರಿಂದ ನಿಪಿ-10 ರ ಪ್ರಕಾರ ಮಾರಾಟ ಮಾಡಿರುವ ಜಮೀನುಗಳಿಗೆ ಸಂಬಂಧಿಸಿದಂತೆ ನಮ್ಮ ಕುಟುಂಬದ ಸದಸ್ಯರ ನಡುವೆ ಕುಟುಂಬ ವ್ಯವಸ್ಥಾ ಪತ್ರ ಆಗಿದೆ ಎಂದರೆ ಸರಿಯಲ್ಲ. ಸದರಿ ವ್ಯವಸ್ಥಾ ಪತ್ರದ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಅವರ ಹೆಸರುಗಳು ದಾಖಲಾಗಿವೆ ಎಂದರೆ ಸರಿಯಲ್ಲ. ತದನಂತರ ಸದರಿ ಜಮೀನುಗಳ ಮಾಲೀಕರು ಭೂ-ಪರಿವರ್ತನೆ ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನು ವ್ಯವಸ್ಥಾ ಪತ್ರದ ಪ್ರಕಾರ ಖಾತೆಯಾದ ಬಗ್ಗೆ ನಿಪಿ-11 ಮತ್ತು ನಿಪಿ-12 ರಲ್ಲಿ ನಮೂದಾಗಿವೆ ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**